# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ನಂ.16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080,
ಇ-ಮೇಲ್: karsec@gmail.com ದೂರವಾಣಿ: 080-22205189.

## ರಾಜ್ಯ ಚುನಾವಣಾ ಆಯೋಗದ ನಡವಳಿಗಳು

ವಿಷಯ : ವಿವಿಧ ಕಾರಣಗಳಿಂದ ತೆರವಾಗಿರುವ ನಗರ ಸ್ಥಳೀಯ ಸಂಸ್ಥೆಗಳ ಉಪ ಚುನಾವಣೆ 2024 ರ ಸಂಬಂಧ ದಾವಣಗೆರೆ ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:43ರ ಉಪ ಚುನಾವಣೆ ಹಿಂಪಡೆಯುವ ಕುರಿತು.

ಉಲ್ಲೇಖ: ಆಯೋಗದ ಆದೇಶ ಸಂಖ್ಯೆ:SECK/ULB/BELN/1/2024-ULB, ದಿನಾಂಕ: 18/10/2024.

******

**ಪ್ರಸ್ತಾವನೆ:**

ಮೇಲೆ ಓದಲಾದ ಆದೇಶದಲ್ಲಿ, ವಿವಿಧ ಕಾರಣಗಳಿಂದ ತೆರವಾಗಿರುವ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆಯನ್ನು ಘೋಷಿಸಲಾಗಿದ್ದು, ಸದರಿ ಆದೇಶದನ್ವಯ ಜಿಲ್ಲಾಧಿಕಾರಿಗಳು ಮತ್ತು ಚುನಾವಣಾಧಿಕಾರಿಗಳು ದಿನಾಂಕ: 04/11/2024 ರಂದು ಚುನಾವಣಾ ಅಧಿಸೂಚನೆಯನ್ನು ಹೊರಡಿಸಲು ಆದೇಶಿಸಲಾಗಿರುತ್ತದೆ. ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಕೌನ್ಸಿಲರ್ ಪದಾವಧಿಯು ಮೊದಲ ಸಭೆಗಾಗಿ ನೇಮಕ ಮಾಡಲಾದ ದಿನಾಂಕದಂದು ಪ್ರಾರಂಭವಾಗಿ ಪದಾವಧಿಯು ಐದು ವರ್ಷಗಳಿರುತ್ತದೆ. ದಾವಣಗೆರೆ ಮಾಹಾನಗರ ಪಾಲಿಕೆಗೆ ದಿನಾಂಕ: 12/11/2019 ರಂದು ಸಾರ್ವತ್ರಿಕ ಚುನಾವಣೆ ನಡೆಸಲಾಗಿದ್ದು, ದಿನಾಂಕ: 19/02/2020 ರಂದು ಪ್ರಥಮ ಸಭೆಗಾಗಿ ದಿನಾಂಕವನ್ನು ಗೊತ್ತುಪಡಿಸಲಾಗಿರುತ್ತದೆ. ಅದರಂತೆ ಚುನಾಯಿತ ಕೌನ್ಸಿಲರುಗಳ ಪದಾವಧಿಯು ದಿನಾಂಕ: 18/02/2025ಕ್ಕೆ ಮುಕ್ತಾಯಗೊಳ್ಳಲಿದೆ.

**ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ಪ್ರಕರಣ 24** ರಲ್ಲಿ "ಕೌನ್ಸಿಲರನ ನಿವೃತ್ತಿಯ ಸಾಮಾನ್ಯ ದಿನಾಂಕಕ್ಕಿಂತ ಮುಂಚೆ 04 ತಿಂಗಳುಗಳ ಒಳಗೆ ಸಂಭವಿಸಿದ ಆಕಸ್ಮಿಕ ಸ್ಥಾನವನ್ನು ಭರ್ತಿ ಮಾಡಲು ಯಾವುದೇ ಚುನಾವಣೆ ನಡೆಸತಕ್ಕದ್ದಲ್ಲ ಮತ್ತು ಅಂತಹ ಖಾಲಿ ಸ್ಥಾನವನ್ನು ಮುಂದಿನ ಸಾಮಾನ್ಯ ಚುನಾವಣೆಯಲ್ಲಿ ಭರ್ತಿ ಮಾಡತಕ್ಕದ್ದು" ಎಂದು ತಿಳಿಸಲಾಗಿರುತ್ತದೆ.

ದಾವಣಗೆರೆ ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 43 ರ ಚುನಾಯಿತ ಕೌನ್ಸಿಲರು ದಿನಾಂಕ :11.05.2024 ರಂದು ಮರಣ ಹೊಂದಿದ್ದು , ಖಾಲಿ ಸ್ಥಾನದ ಬಗ್ಗೆ ದಿನಾಂಕ: 06.09.24 ರಂದು ವರದಿ ಸ್ವೀಕೃತವಾಗಿರುತ್ತದೆ.

ದಿನಾಂಕ:18/2/2025ಕ್ಕೆ ದಾವಣಗೆರೆ ಮಹಾನಗರ ಪಾಲಿಕೆಯ ಚುನಾಯಿತ ಸದಸ್ಯರ ಅವಧಿ

I/113160/2024

ಮುಕ್ತಾಯಗೊಳ್ಳುತ್ತಿದ್ದು, ಖಾಲಿ ಸ್ಥಾನವು **ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ಪ್ರಕರಣ 24** ರಲ್ಲಿ ತಿಳಿಸಿರುವ ಅವಧಿಗಿಂತ ಹೆಚ್ಚಿನ ಅವಧಿ ಹೊಂದಿದ್ದ ಹಿನ್ನೆಲೆಯಲ್ಲಿ , ಸದರಿ ವಾರ್ಡ್ ಗೆ ಉಪಚುನಾವಣೆ ಘೋಷಿಸಲಾಗಿರುತ್ತದೆ.

ಚುನಾವಣಾ ಫಲಿತಾಂಶ ಘೋಷಣೆ ದಿನಾಂಕದಿಂದ (26.11.2024) ಚುನಾಯಿತ ಕೌನ್ಸಿಲರುಗಳ ಪದಾವಧಿಯು ಮುಕ್ತಾಯಗೊಳ್ಳುವ ದಿನಾಂಕಕ್ಕೆ ( 18/02/2025) ಅಂದಾಜು 3 ತಿಂಗಳಿಗೂ ಕಡಿಮೆ ಅವಧಿ ಉಳಿದಿರುವ ಕಾರಣ ಘೋಷಿಸಿರುವ ಉಪಚುನಾವಣೆಯನ್ನು ಹಿಂಪಡೆಯುವುದು ಸೂಕ್ತವೆಂದು ತೀರ್ಮಾನಿಸಿ , ಕೆಳಕಂಡಂತೆ ಆದೇಶಿಸಲಾಗಿದೆ.

**ಆಯೋಗದ ಆದೇಶ ಸಂಖ್ಯೆ: SECK/ULB/BELN/1/2024-ULB, ಬೆಂಗಳೂರು,**

**ದಿನಾಂಕ:** 22-10-2024**.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಾವಣಗೆರೆ ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 43 ಕ್ಕೆ ಘೋಷಿಸಿರುವ ಉಪ ಚುನಾವಣೆಯನ್ನು ಹಿಂಡೆಯಲಾಗಿದೆ ಎಂದು ಈ ಮೂಲಕ ಆದೇಶಿಸಿದೆ.

ಆದೇಶಾನುಸಾರ,

Signed by
Narappa Revanasiddappa Nagaraju
Date: 22-10-2024 14:49:35

ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ,**

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರಿಗೆ ಕಳುಹಿಸುತ್ತಾ, ವಾರ್ಡ 43 ರ ಉಪ ಚುನಾವಣೆಯನ್ನು ಕೈ ಬಿಟ್ಟು , ಜಗಳೂರು ಪಟ್ಟಣ ಪಂಚಾಯತಿಯ ವಾರ್ಡ್ ಸಂಖ್ಯೆ -9 ಕ್ಕೆ ಉಪ ಚುನಾವಣೆಯನ್ನು ಈಗಾಗಲೇ ಹೊರಡಿಸಿರುವ ಚುನಾವನಾ ವೇಳಾಪಟ್ಟಿಯಂತೆ ನಡೆಸಲು ಅಗತ್ಯ ಕ್ರಮ ವಹಿಸುವುದು.